**ಮಾಜಿ ರಾಷ್ಟ್ರಪತಿ ಕೆ. ಆರ್ ನಾರಾಯಣನ್ ಅಸಾಧಾರಣ**
**ಕರ್ಮಯೋಗಿ – ಕೆ.ಹೆಚ್. ಮುನಿಯಪ್ಪ**

ಬೆಂಗಳೂರು :ನವೆಂಬರ್ 10,2005

ಮಾಜಿ ರಾಷ್ಟ್ರಪತಿ ಕೆ.ಆರ್.ನಾರಾಯಣನ್ ಅವರ ನಿಧನಕ್ಕೆ ಕೇಂದ್ರ ಬಂದರು , ರಸ್ತೆ ಸಾರಿಗೆ ಮತ್ತು ಹೆದ್ದಾರಿ ಖಾತೆ ರಾಜ್ಯ ಸಚಿವ ಶ್ರೀ ಕೆ.ಹೆಚ್. ಮುನಿಯಪ್ಪ ಕಂಬನಿ ಮಿಡಿದಿದ್ದಾರೆ . ತಮ್ಮ ಶೋಕ ಸಂದೇಶದಲ್ಲಿ ಅವರು , ನಾರಾಯಣನ್ ಅವರು ಒಬ್ಬ ಶ್ರೇಷ್ಠ ಮುತ್ಸದಿ , ಅಸಾಧಾರಣ ಕರ್ಮಯೋಗಿ, ಚಿಂತಕ ಹಾಗೂ ದುರ್ಬಲ ವರ್ಗದವರ ಧೀಮಂತ ನಾಯಕ ಎಂದು ಹೇಳಿದ್ದಾರೆ .

ನಾರಾಯಣನ್ ಅವರ ನಿಧನದಿಂದ ದೇಶ ಓರ್ವ ಶ್ರೇಷ್ಠ ಪುತ್ರ ಹಾಗೂ ಆದರ್ಶ ನಾಯಕನನ್ನು ಕಳೆದುಕೊಂಡಿದೆ ಎಂದು ತಿಳಿಸಿದ್ದಾರೆ .

ನಾರಾಯಣನ್ ಅವರ ಅಗಲಿಕೆಯ ದು:ಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ಭಗವಂತ ನೀಡಲಿ ಎಂದು ಅವರು ಪ್ರಾರ್ಥಿಸಿದ್ದಾರೆ .

******

ಆ ದ : ಪಚ :ಸು :ಆ:ಕ: ಬೆಂ : 14:45 10–11–2005